# ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ.

ನಂ.ಎಲ್‌ಎನ್‌ಡಿ/ಸಿಆರ್/324/11-12 ದಿನಾಂಕ:09.03.2012

## -:ಅಧಿಕೃತ ಜ್ಞಾಪನಾ ಪತ್ರ:-

ವಿಷಯ:- ಮೆ: ಎಂ.ಎಸ್.ಪಿ.ಎಲ್ ಲಿಮಿಟೆಡ್ ಮತ್ತು ಮೆ:ಆರೇಸ್ ಐರನ್ ಸ್ಟೀಲ್ ಲಿ. ಹೊಸಪೇಟೆ ಇವರ ಪರವಾಗಿ ಪರಿಹಾರಾತ್ಮಾತಕ ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ ಹರಪನಹಳ್ಳಿ ತಾಲ್ಲೂಕು ಚಟ್ನಿಹಳ್ಳಿ ಗ್ರಾಮದ ಸ.ನಂ.131/ಬಿಪಿ1 ರಲ್ಲಿ 12.00 ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವ ಬಗ್ಗೆ.

ಉಲ್ಲೇಖ:-
1. ಎಂ.ಎಸ್‌ಪಿಎಲ್ ಲಿಮಿಟೆಡ್, ಹೊಸಪೇಟೆ ಇವರ ಪತ್ರ ಸಂ.MSPL/W&G/C&D/req 3/2011-12 ದಿ:2.12.2011
2. ಉಪ ವಿಭಾಗಾಧಿಕಾರಿಗಳು, ಹರಪನಹಳ್ಳಿ ಇವರ ಪತ್ರ ಸಂ.ಎಲ್‌ಎನ್‌ಡಿ/ಸಿಆರ್/175/11-12 ದಿ:23.1.2012
3. ತಹಶೀಲ್ದಾರ್, ಹರಪನಹಳ್ಳಿ ಇವರ ಪತ್ರ ಸಂ.ಎಲ್‌ಎನ್‌ಡಿ/ಸಿಆರ್/121/11-12 ದಿ:16.1.2012
4. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ದಾವಣಗೆರೆ ಇವರ ಪತ್ರ ಸಂ.ಎ2ಸಿ&ಡಿ/ಭೂಮಿ/ಪನೆತೊ/ವಿವ-34/11-12 ದಿ:6.3.12
5. ಸರ್ಕಾರದ ಅಧಿಸೂಚನೆ ಸಂ.ಆರ್‌ಡಿ/106/ಎಲ್‌ಜಿಪಿ/88 ದಿ:20.7.94

-oo-

ಮೆ: ಎಂ.ಎಸ್.ಪಿ.ಎಲ್ ಲಿಮಿಟೆಡ್ ಮತ್ತು ಮೆ:ಆರೇಸ್ ಐರನ್ ಸ್ಟೀಲ್ ಲಿ. ಹೊಸಪೇಟೆ ರವರು ಉಲ್ಲೇಖ (1)ರ ಪತ್ರದಲ್ಲಿ ಕೊಪ್ಪಳ ಜಿಲ್ಲೆಯ ಹಾಲುವರ್ತಿ ಗ್ರಾಮದಲ್ಲಿ ಸ್ಟೀಲ್ ಕಂಪನಿಯನ್ನು ಸ್ಥಾಪಿಸಲು ಅದಕ್ಕೆ ಬೇಕಾಗುವ ನೀರು ಸರಬರಾಜನ್ನು ತುಂಗಾಭದ್ರಾ ಜಲಾಶಯದಿಂದ ಕಾಸನಕಂಡಿ ರಕ್ಷಿತ ಅರಣ್ಯ ಪ್ರದೇಶದಲ್ಲಿ ಪೈಪ್ ಲೈನ್ ಅಳವಡಿಕೆಗೆ 4.89 ಹೆಕ್ಟರ್ (12.00 ಎಕರೆ) ಜಮೀನು ಅರಣ್ಯ ಪ್ರದೇಶ ನಷ್ಟವಾಗಲಿದ್ದು, ಸದರಿ ಪ್ರದೇಶದ ಬದಲಿಗೆ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ ಹರಪನಹಳ್ಳಿ ತಾಲ್ಲೂಕು, ಚಟ್ನಿಹಳ್ಳಿ ಗ್ರಾಮದ ಸ.ನಂ.131/ಬಿಪಿ1 ರಲ್ಲಿ 12.00 ಎಕರೆ ಸಿ & ಡಿ ವರ್ಗದ ಜಮೀನನ್ನು ಅರಣ್ಯ ಇಲಾಖೆಗೆ ತಮ್ಮ ಕಂಪನಿಯವರ ಪರವಾಗಿ ವರ್ಗಾಯಿಸಲು ಕೋರಿರುತ್ತಾರೆ.

ಈ ಬಗ್ಗೆ ಉಲ್ಲೇಖ (2) ಮತ್ತು (3)ರ ಉಪವಿಭಾಗಾಧಿಕಾರಿ ಹರಪನಹಳ್ಳಿ ಮತ್ತು ತಹಶೀಲ್ದಾರ್, ಹರಪನಹಳ್ಳಿ ಇವರು ಸಲ್ಲಿಸಿದ ವರದಿಯ ವಿವರ ಪರಿಶೀಲನೆ ನಡೆಸಿದೆ.

ಉಪವಿಭಾಗಾಧಿಕಾರಿಗಳು, ಹರಪನಹಳ್ಳಿ ಇವರು ವರದಿ ಮಾಡಿರುವಂತೆ ಹರಪನಹಳ್ಳಿ ತಾಲ್ಲೂಕು ಚಟ್ನಿಹಳ್ಳಿ ಗ್ರಾಮದ ಸ.ನಂ.131/ಬಿಪಿ1 ರಲ್ಲಿ 105.34 ಎಕರೆ ಜಮೀನು ಸರ್ಕಾರ ಎಂದು ಖಾತೆ ಇರುತ್ತದೆ. ಅರಣ್ಯ ಇಲಾಖೆಗೆ ವರ್ಗಾಯಿಸುವ ಜಮೀನನ್ನು ಸರ್ವೆ ನಕ್ಷೆಯಲ್ಲಿ ಗುರುತು ಮಾಡಲಾಗಿದ್ದು, ಬಗರ್ ಹುಕುಂ ಸಾಗುವಳಿಯಿಂದ ಮುಕ್ತವಾಗಿದ್ದು, ಸಿ & ಡಿ ವರ್ಗದ ಜಮೀನುಗಳಾಗಿದ್ದು ಲ್ಯಾಂಡ್ ಬ್ಯಾಂಕಿಗೆ ಸೇರಿದ ಜಮೀನುಗಳು ಆಗಿರುತ್ತವೆ. ಎತ್ತರವಾದ ಗುಡ್ಡ ಪ್ರದೇಶವಾಗಿದ್ದು, ಸಣ್ಣಪುಟ್ಟ ಕುರುಚಲು ಗಿಡಗಳಿದ್ದು ಬೆಲೆಬಾಳುವ ಯಾವುದೇ ಮರ ಮಾಲ್ಕಿ ಇರುವುದಿಲ್ಲ ಹಾಗೂ ಗ್ರಾಮಸ್ಥರ ತಕರಾರು ಇರುವುದಿಲ್ಲ. ಆದ್ದರಿಂದ ಚಟ್ನಿಹಳ್ಳಿ ಗ್ರಾಮದ ಸ.ನಂ.131/ಬಿಪಿ1 ರಲ್ಲಿ 105.34 ಎಕರೆ ಜಮೀನಿನ ಪೈಕಿ 12.00 ಎಕರೆ ಜಮೀನನ್ನು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಮೆ: ಎಂ.ಎಸ್.ಪಿ.ಎಲ್ ಲಿಮಿಟೆಡ್ ಮತ್ತು ಮೆ:ಆರೇಸ್ ಐರನ್ ಸ್ಟೀಲ್ ಲಿ. ಹೊಸಪೇಟೆ ಇವರ ಪರವಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಉಲ್ಲೇಖ (4)ರಲ್ಲಿ ಅರಣ್ಯ ಸಂರಕ್ಷಣಾಧಿಕಾರಿಗಳು, ದಾವಣಗೆರೆ ಇವರು ಪ್ರಸ್ತಾಪಿತ ಜಮೀನನ್ನು ಪರಿಹರಾತ್ಮಕ ನೆಡುತೋಪು ಬೆಳೆಸುವ ಉದ್ದೇಶಕ್ಕೆ ಅರಣ್ಯ ಇಲಾಖೆಗೆ ವರ್ಗಾಯಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಉಪವಿಭಾಗಾಧಿಕಾರಿಗಳ ಪ್ರಸ್ತಾವನೆಯನ್ನು ಅಂಗೀಕರಿಸಿ ಮೆ: ಎಂ.ಎಸ್.ಪಿ.ಎಲ್ ಲಿಮಿಟೆಡ್ ಮತ್ತು ಮೆ:ಆರೇಸ್ ಐರನ್ ಸ್ಟೀಲ್ ಲಿ. ಹೊಸಪೇಟೆ ಇವರಿಗೆ ಕೊಪ್ಪಳ ಜಿಲ್ಲೆಯ ಹಾಲುವರ್ತಿ ಗ್ರಾಮದಲ್ಲಿ ಸ್ಟೀಲ್ ಕಂಪನಿಯನ್ನು ಸ್ಥಾಪಿಸಲು ಅದಕ್ಕೆ ಬೇಕಾಗುವ ನೀರು ಸರಬರಾಜನ್ನು ತುಂಗಾಭದ್ರಾ ಜಲಾಶಯದಿಂದ ಕಾಸನಕಂಡಿ ರಕ್ಷಿತ ಅರಣ್ಯ ಪ್ರದೇಶದಲ್ಲಿ ಪೈಪ್ ಲೈನ್ ಅಳವಡಿಕೆಗೆ ಅನುಮತಿ ದೊರಕಿದ್ದು, ಸದರಿ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ಸೇರಿದ 12.00 ಎಕರೆ ಜಮೀನು ಬದಲಿಗೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಅರಣ್ಯ ಇಲಾಖೆಗೆ ವರ್ಗಾಯಿಸಲು ಅವಕಾಶವಿರುವಂತೆ ಹರಪನಹಳ್ಳಿ ತಾಲ್ಲೂಕು ಚಟ್ನಿಹಳ್ಳಿ ಗ್ರಾಮದ ಸ.ನಂ.131/ಬಿಪಿ1 ರಲ್ಲಿ 12.00 ಎಕರೆ ಜಮೀನು ಬಗರ್ ಹುಕುಂ ಸಾಗುವಳಿ ಮತ್ತು ಇತರೆ ಆಕ್ಷೇಪಣೆಗಳಿಂದ ಮುಕ್ತವಾಗಿದ್ದು, ಉಲ್ಲೇಖ (5) ರ ಸರ್ಕಾರದ ಆದೇಶದ ಅನ್ವಯ ಲ್ಯಾಂಡ್ ಬ್ಯಾಂಕ್‌ನಲ್ಲಿರುವ ಜಮೀನನ್ನು ವಾಪಸ್ಸು ಪಡೆದು ಸದರಿ ಜಮೀನುಗಳನ್ನು ಭೂಕಂದಾಯ ಕಾಯ್ದೆ 1964 ರ ಕಲಂ 71 ರ ಅನ್ವಯ ನೆಡುತೋಪು ನಿರ್ಮಾಣಕ್ಕೆ ಕಾಯ್ದಿರಿಸಿ ಅರಣ್ಯ ಇಲಾಖೆಗೆ ವರ್ಗಾಯಿಸಲು ಆದೇಶಿಸಿದೆ.

ತಹಶೀಲ್ದಾರ್, ಹರಪನಹಳ್ಳಿ ಇವರು ಸರ್ವೆಸ್ಕೆಚ್‌ನಲ್ಲಿ ಗುರ್ತಿಸಿರುವ ವಿಸ್ತೀರ್ಣವನ್ನು ಚಕ್ಕುಬಂದಿಯೊಂದಿಗೆ ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಚಟ್ನಿಹಳ್ಳಿ ಗ್ರಾಮದ 131/ಬಿಪಿ1 ರಲ್ಲಿನ 12.00 ಎಕರೆ ಜಮೀನಿಗೆ ಚಕ್ಕುಬಂದಿ.

| | |
|---|---|
| ಪೂರ್ವಕ್ಕೆ: | ಉಚ್ಚಂಗಿದುರ್ಗ ಗ್ರಾಮದ ಗಡಿ |
| ಪಶ್ಚಿಮಕ್ಕೆ | ಸ.ನಂ.131/ಬಿಪಿ1 ರ ಉಳಿಕೆ ಜಮೀನು |
| ಉತ್ತರಕ್ಕೆ: | ಸ.ನಂ.131/ಬಿಪಿ1 ರ ಉಳಿಕೆ ಜಮೀನು |
| ದಕ್ಷಿಣಕ್ಕೆ: | ಸ.ನಂ.131/ಬಿಪಿ1 ರ ಉಳಿಕೆ ಜಮೀನು |

## ಷರತ್ತುಗಳು

1. ವರ್ಗಾವಣೆಗೆ ಆದೇಶಿಸಿರುವ ಜಮೀನುಗಳನ್ನು ಅರಣ್ಯ ಇಲಾಖೆಯು ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
2. ಪ್ರಸ್ತಾಪಿತ ಜಮೀನು ಸರ್ಕಾರಿ ಖರಾಬು ಪ್ರದೇಶವಾಗಿರುವುದರಿಂದ ಜಾನುವಾರುಗಳು ಮೇಯುವಿಕೆಗೆ ಅವಕಾಶ ನೀಡತಕ್ಕದ್ದು.

(ಎಸ್.ಎಸ್.ಪಟ್ಟಣಶೆಟ್ಟಿ)
ಜಿಲ್ಲಾಧಿಕಾರಿಗಳು,
ದಾವಣಗೆರೆ ಜಿಲ್ಲೆ

**ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:-**

1. ಉಪ ಅರಣ್ಯ ಸಂರಕ್ಷಣಾಧಿಕಾರಿ, ದಾವಣಗೆರೆ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಉಪವಿಭಾಗಾಧಿಕಾರಿಗಳು, ಹರಪನಹಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ತಹಶೀಲ್ದಾರ್, ಹರಪನಹಳ್ಳಿ ಇವರಿಗೆ ಮೂಲ ಕಡತದೊಂದಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದ್ದು, ಪಹಣಿಯಲ್ಲಿ ಸೂಕ್ತ ಬದಲಾವಣೆ ಮಾಡಿದ ಬಗ್ಗೆ ಪಹಣಿಯೊಂದಿಗೆ ವರದಿ ಸಲ್ಲಿಸಲು ತಿಳಿಸಿದೆ.
4. ಮೆ: ಎಂ.ಎಸ್.ಪಿ.ಎಲ್ ಲಿಮಿಟೆಡ್ ಮತ್ತು ಮೆ: ಆರೇಸ್ ಐರನ್ ಸ್ಟೀಲ್ ಲಿ. ಹೊಸಪೇಟೆ.

Version:1.0.0.0 ಮ್ಯುಟೇಶನ್ ಪ್ರತಿ ಮುದ್ರಿಸಿದ ದಿನಾಂಕ 27/03/2012 00:00:00

ಪುಟ ಸಂಖ್ಯೆ : 1

ಜಿಲ್ಲೆ : ದಾವಣಗೆರೆ
ತಾಲ್ಲೂಕು: ಹರಪನಹಳ್ಳಿ
ಹೋಬಳಿ: ಅರಸಿಕೇರಿ
ಗ್ರಾಮ: ಚಟ್ನಿಹಳ್ಳಿ

ವಹಿವಾಟು ವರ್ಷ : 2011-2012
ವಹಿವಾಟು ಸಂಖ್ಯೆ : 109
M.R.ನಂಬರ್ : H 102

ಮೂಲ: ಜಿಲ್ಲಾಧೀಕಾರಿ ಆದೇಶ
ಬದಲಾವಣೆ ರೀತಿ : ಕೋರ್ಟ್ ಆದೇಶ
ಸ್ವಾಧೀನತೆ ರೀತಿ: ಪಹಣಿ ಬದಲಾವಣೆ
ಸಂಖ್ಯೆ : LND/CR/324/11-12
ದಿನಾಂಕ: 09/03/2012

ಈಗಿನ ಸರ್ವೆ ನಂಬರಿನ ವಿವರ (ವಿಸ್ತೀರ್ಣ ಎಕರೆ ಮತ್ತು ಸೆಂಟ್‌ಗಳಲ್ಲಿ)

| ಸರ್ವೆ ನಂಬರು | ಭೂಕಂದಾಯ ವಿವರ | | ಭೂಕಂದಾಯ ವಿವರ | | ಪಟ್ಟಾ | ಮಣ್ಣಿನ ನಮೂನೆ | ತರಾ |
|---|---|---|---|---|---|---|---|
| 131/*/BP1 | ಒಟ್ಟು | 105.34.00.00 | ಕಂದಾಯ | 0.00 | ಸರ್ಕಾರಿ | ಉಸುಕು | |
| | ಒಟ್ಟು | | ಜೂಡಿ | 0.00 | | | |
| | ಖರಾಬ್(ಬ) | | ಸೆಸ್ಸು | 0.00 | | | |
| | | | ನೀರಿನ ದರ | 0.00 | | | |

ಸರ್ವೆ ನಂಬರಿನಲ್ಲಿ ಸ್ವಾಧೀನದಾರರು ಮತ್ತು ಅವರ ವಿಸ್ತೀರ್ಣ

| ಸರ್ವೆ ನಂಬರು | ಸ್ವಾಧೀನದಾರರ ಹೆಸರು | ವಿಸ್ತೀರ್ಣ | ಖಾತೆ ನಂಬರು | ಸ್ವಾಧೀನತೆಯ ರೀತಿ | ಹಕ್ಕುಗಳು | ಋಣಗಳು | ಸ್ಥಿತಿ |
|---|---|---|---|---|---|---|---|
| 131/*/BP1 | ಸರ್ಕಾರ - | 105.34.00.00 | 0 | | | | Original |
| 131/*/BP1 | ಸರ್ಕಾರ - | 93.34.00.00 | 0 | ಜಿಲ್ಲಾಧಿಕಾರಿಗಳ | | | ಬದಲಿಸಿದೆ |
| 131/*/BP1 | ವಲಯ ಅರಣ್ಯಾಧಿಕಾರಿಗಳು | 12.00.00.00 | 0 | ಜಿಲ್ಲಾಧಿಕಾರಿಗಳ | ಮೆ॥ಎಂ ಎಸ್ ಪಿ ಎಲ್ ಲಿ.ಮತ್ತು ಮೆ॥ಆರೇಸ್ ಐರನ್ ಸ್ಟೀಲ್ ಲಿಮಿಟೆಡ್ ಹೊಸಪೇಟೆ ಇವರ ಪರವಾಗಿ ವಿಸ್ತೀರ್ಣ12-00ಎಕರೆ ಜಮೀನನ್ನು ಪರಿಹಾರಾತ್ಮಕ ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ | | ಸೇರಿಸಲಾಗಿದೆ |

ಮ್ಯುಟೇಶನ್ ಆದೇಶದ ವಿವರ :
ಮಾನ್ಯ ಜಿಲ್ಲಾಧಿಕಾರಿಗಳು ದಾವಣಗೆರೆ ಇವರ ಆದೇಶ ಸಂಖ್ಯೆ ನಂ ಕಂ/ಎಲ್.ಎನ್.ಡಿ./ಸಿ ಆರ್/324/11-12 ದಿನಾಂಕ 9-03-2012 ರಂತೆ ಹಕ್ಕು ಬದಲಾವಣೆ ಅಂಗೀಕರಿಸಿದೆ.

ಮೊಕ್ಕಾಂ : ಹರಪನಹಳ್ಳಿ
ಮ್ಯುಟೇಶನ್ ಆದೇಶದ ದಿನಾಂಕ : 24/03/2012

ಸಹಿ/-
ರಾಜಸ್ವ ನಿರೀಕ್ಷಕರು

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ

ನಂ.ಎಲ್.ಎನ್.ಡಿ/ಸಿಆರ್/324/2011-12 ದಿನಾಂಕ:26.08.2017.

## -: ಪರಿಷ್ಕೃತ ತಿದ್ದುಪಡಿ ಜ್ಞಾಪನಾ ಪತ್ರ :-

ಜಿಲ್ಲಾಧಿಕಾರಿಗಳ ಕಛೇರಿ ದಾವಣಗೆರೆ ಜಿಲ್ಲೆ

ವಿಷಯ:- ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಚಟ್ನಿಹಳ್ಳಿ ಗ್ರಾಮದ ಸ.ನಂ.131/ಬಿಪಿ1 ರಲ್ಲಿ 12-00 ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿರುವ ಆದೇಶದ ಷರತ್ತಿನಲ್ಲಿ ಜಾನುವಾರುಗಳಿಗೆ ಕಾಯ್ದಿರಿಸಲು ವಿಧಿಸಿರುವ ಷರತ್ತನ್ನು ತೆಗೆದುಹಾಕಲು ಕೋರಿರುವ ಕುರಿತು

ಉಲ್ಲೇಖ:-
1. ಮೆ॥ ಆರೇಸ್ ಐರನ್ ಸ್ಟೀಲ್ ಲಿ. ಹೊಸಪೇಟೆ ಇವರ ಮನವಿ ದಿ:04-08-2017
2. ಈ ಕಾರ್ಯಾಲಯದ ಅಧಿಕೃತ ಜ್ಞಾಪನ ಪತ್ರಸಮಸಂಖ್ಯೆ ದಿನಾಂಕ: 09-03-2012

****

ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಚಟ್ನಿಹಳ್ಳಿ ಗ್ರಾಮದ ಸ.ನಂ.131/ಬಿಪಿ1 ರಲ್ಲಿ 12-00 ಎಕರೆ ಜಮೀನನ್ನು ಉಲ್ಲೇಖ (2) ರಂತೆ ಮೆ॥ ಎಂ.ಎಸ್.ಪಿ.ಎಲ್ ಲಿಮಿಟೆಡ್ ಮತ್ತು ಮೆ॥ ಆರೇಸ್ ಐರನ್ ಸ್ಟೀಲ್ ಲಿ. ಹೊಸಪೇಟೆ ಇವರ ಪರವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ ಅರಣ್ಯ ಇಲಾಖೆಯವರಿಗೆ ನಿಗಧಿತ ಉದ್ದೇಶಕ್ಕೆ ಹಾಗೂ ಜಾನುವಾರುಗಳಿಗೆ ಮೇವಿಗಾಗಿ ಕಾಯ್ದಿರಿಸುವಂತೆ ಷರತ್ತು ವಿಧಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 71 ರಡಿ ಕಾಯ್ದಿರಿಸಿ ಆದೇಶ ನೀಡಲಾಗಿರುತ್ತದೆ.

ಉಲ್ಲೇಖ (1) ರಂತೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯವರು ತಿಳಿಸಿದಂತೆ ವರ್ಗಾವಣೆಯಾದ ಜಮೀನಿನಲ್ಲಿ ಜಾನುವಾರುಗಳಿಗೆ ಮೇವಿಗಾಗಿ ಕಾಯ್ದಿರಿಸಲು ಅರಣ್ಯ ಇಲಾಖೆ ಕಾಯ್ದೆಯಡಿ ಅವಕಾಶವಿಲ್ಲದ ಕಾರಣ ಸದರಿ ಷರತ್ತನ್ನು ತೆಗೆದುಹಾಕಲು ಕೋರಿರುತ್ತಾರೆ ಆದ್ದರಿಂದ ಸದರಿ ಷರತ್ತು ತೆಗೆದು ತಿದ್ದುಪಡಿ ಆದೇಶದೊಂದಿಗೆ ಪರಿಷ್ಕೃತ ಆದೇಶ ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರಯುಕ್ತ ಉಲ್ಲೇಖ (2) ರ ಆದೇಶದಲ್ಲಿ ವಿಧಿಸಿದ್ದ **ಜಾನುವಾರುಗಳಿಗೆ ಮೇಯುವಿಕೆಗೆ ಅವಕಾಶ ನೀಡತಕ್ಕದ್ದು ಎಂಬ ಷರತ್ತನ್ನು ಮಾತ್ರ ತೆಗೆದು ಹಾಕಲಾಗಿದೆ** ಉಳಿದಂತೆ ಸದರಿ ಉಲ್ಲೇಖ (2) ರ ಆದೇಶದಲ್ಲಿನ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ಡಿ.ಎಸ್.ರಮೇಶ್)
ಜಿಲ್ಲಾಧಿಕಾರಿ,
ದಾವಣಗೆರೆ ಜಿಲ್ಲೆ.

ಪ್ರತಿಯನ್ನು:

1. ಉಪವಿಭಾಗಾಧಿಕಾರಿಗಳು, ಹರಪನಹಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ
2. ತಹಶೀಲ್ದಾರ್, ಹರಪನಹಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ
3. ಹೆಚ್ಚುವರಿ ಪ್ರತಿ

ಗ್ರಾಮ ನಮೂನೆ ೨ ‍ 1135219682 **ರೆಕಾರ್ಡ್ ಆಫ್ ರೈಟ್ಸ್, ಗೇಣಿ ಮತ್ತು ಪಹಣಿ ಪತ್ರಿಕೆ (R.T.C) ಫಾರಂ ನಂ. 01** Valid from 27/03/2012 17:06:43 To Till Date Village Account Form No. 2

Version 1.0.0

ತಾಲ್ಲೂಕು ಮೊಹರು ತಾಲ್ಲೂಕು : ಹರಪನಹಳ್ಳಿ ಹೋಬಳಿ : ಅರಸಿಕೇರಿ ಗ್ರಾಮ : ಚಟ್ನಿಹಳ್ಳಿ ಪುಟದ ಕ್ರಮ ಸಂಖ್ಯೆ : 99

| 1. ಸರ್ವೆ ನಂಬರು | 3. ಜೇತವಾರು | ಎಕರೆ ಗುಂಟೆ ಆ | 4. ಕಂದಾಯ | ರೂ. ಪೈ. |
|---|---|---|---|---|
| 131 | ಒಟ್ಟು ವಿಸ್ತೀರ್ಣ | 105.34.00.00 | (ಅ) ಭೂ ಕಂದಾಯ | |
| | ಪೂಟ್ ಖರಾಬ್ (ಅ) | | (ಬ) ಜೋಡಿ | |
| | ಪೂಟ್ ಖರಾಬ್ (ಬ) | | (ಕ) ಸೆಸ್ಸುಗಳು | |
| | ಉಳಿದದ್ದು | 105.34.00.00 | (ಡ) ನೀರಿನ ದರ | |
| 2. ಹಿಸ್ಸಾ BP1 | | | ಒಟ್ಟು | |

| 5. ಮಣ್ಣಿನ ನಮೂನೆ ಉಸುಕು | 7. ಮರಗಳ ಸಂಖ್ಯೆ | | | 8. ಜೇತುವಾರ ಪ್ರಕಾರ ನೀರಾವರಿಯ ವಿಸ್ತೀರ್ಣ | | | | |
|---|---|---|---|---|---|---|---|---|
| | ಹೆಸರು | ಸಂಖ್ಯೆ | ಕ್ರ. ಸ. | ನೀರಾವರಿ ಮೂಲ | ಮುಂಗಾರು | ಹಿಂಗಾರು | ಬಾಗಾಯ್ತು | ಒಟ್ಟು |
| 6. ಪಟ್ಟಾ ಸರ್ಕಾರಿ | | | | | | | | |

| 9. ಕಬ್ಜೆ ಅಥವಾ ಸ್ವಾಧೀನದಾರನ ಹೆಸರು ತಂದೆಯ ಹೆಸರುಮತ್ತು ವಿಳಾಸ | ವಿಸ್ತೀರ್ಣ ಎ ಗುಂ | ಖಾತೆ ನಂ. | 10. ಕಬ್ಜೆ ಅಥವಾ ಸ್ವಾಧೀನತೆಯ ರೀತಿ | 11. ಇತರೆ ಹಕ್ಕುಗಳು ಮತ್ತು ಋಣಗಳು: ಹಕ್ಕುಗಳು: | ಋಣಗಳು: |
|---|---|---|---|---|---|
| •ಸರ್ಕಾರ | 93.34.00.00 | 0 | ಜಿಲ್ಲಾಧಿಕಾರಿಗಳ ಆ | | |
| •ವಲಯ ಅರಣ್ಯಾಧಿಕಾರಿಗಳು | 12.00.00.00 | 0 | ಜಿಲ್ಲಾಧಿಕಾರಿಗಳ ಆ . | ಮೆ॥ಎಂ ಎಸ್ ಪಿ ಎಲ್ ಲಿ .ಮತ್ತು ಮೆ॥ಆರೇಸ್ ಐರನ್ ಸ್ಟೀಲ್ ಲಿಮಿಟೆಡ್ ಹೊಸಪೇಟೆ ಇವರ ಪರವಾಗಿ ವಿಸ್ತೀರ್ಣ12-00ಎಕರೆ ಜಮೀನನ್ನು ಪರಿಹಾರಾತ್ಮಕ ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ | |

12. ಸಾಗುವಳಿ ಮತ್ತು ಗೇಣಿಯ ವಿವರಗಳು — 13. ಭೂಮಿಯ ಉಪಯೋಗ ಮತ್ತು ಬೆಳೆಗಳ ವಿವರ

| ವರ್ಷ ಮತ್ತು ಕಾಲ 1 | ವ್ಯವಸಾಯಗಾರನ ಹೆಸರು ಮತ್ತು ವಾಸಸ್ಥಳ 2 | ಸಾಗುವಳಿ ಪದ್ಧತಿ 3 | ಗೇಣಿಯ ವಿವರ: ವಿಸ್ತೀರ್ಣ ಎ ಗುಂ 4 | ಗುತ್ತಿಗೆ 5 | ಭೂಮಿಯ ಉಪಯೋಗ: ವರ್ಗ 6 | ವಿಸ್ತೀರ್ಣ ಎ ಗುಂ 7 | ಖುಷ್ಕಿ, ತರಿ, ಬಾಗಾಯ್ತು 8 | ಬೆಳೆಯ ಹೆಸರು 9 | ಬೆಳೆಯ ವಿಸ್ತೀರ್ಣ: ಅಮಿಶ್ರ 10 | ಮಿಶ್ರ 11 | ಒಟ್ಟು 12 | ನೀರಾವರಿಯ ಮೂಲ 13 | ಎಕರೆಗೆ ಉತ್ಪತ್ತಿ 14 | ಮಿಶ್ರ ಬೆಳೆಗಳ ಒಟ್ಟು: ಮಿಶ್ರಣದ ಹೆಸರು 15 | ವಿಸ್ತೀರ್ಣ ಎ. ಗುಂ 16 |
|---|---|---|---|---|---|---|---|---|---|---|---|---|---|---|---|
| 2011-2012 ಹಿಂಗಾರು | ಸರ್ಕಾರ | ಸ್ವಂತ | | | | | | | | | | | | | |
| | ವಲಯ ಅರಣ್ಯಾಧಿಕಾರಿಗಳು | ಸ್ವಂತ | | | | | ಖುಷ್ಕಿ | - | | | | - | | | |

ನೀ॥ಬಿ.ಬಿ. ಹೇಳಿಸಲಾಗಿದೆ

(RTC Unique No : -T14021000049359, Printed on : 27/03/2012 17:12:13, Amount : 10./-) Page No.:1/1

ವಿಸ್ತೀರ್ಣ ಎಕರೆ ಮತ್ತು ಗುಂಟೆಗಳಲ್ಲಿ

ಕರ್ನಾಟಕ ಭೂಕಂದಾಯ ನಿಯಮಾವಳಿ 1966 ರ ನಿಯಮ 40, 42, 58 ಮತ್ತು 70